**ಅ.ದಾವಾ. 213/2020** **ಡಿ.ಡಬ್ಲ್ಯೂ- 1**

**ದಿನಾಂಕಃ 04/12/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಎಸ್. ಎ. ವಕೀಲರಿಂದ ವಾದಿಯ ಪರವಾಗಿ.**

ನಾನು ಹೊಳೆನರಸೀಪುರದಲ್ಲಿ ವಾಸವಾಗಿದ್ದೇನೆ. ನನ್ನ ಪತ್ನಿಯೂ ಕೂಡ ಸರ್ಕಾರಿ ಶಿಕ್ಷಕಿಯಾಗಿದ್ದು ಪ್ರಸ್ತುತ ಸೇವೆಯಲ್ಲಿ ಇದ್ದಾರೆ ಎಂದರೆ ಸರಿ . ನನಗೆ ಇಬ್ಬರು ಮಕ್ಕಳು. ಅವರ ಪೈಕಿ ಒಬ್ಬರು ಡಿ. ಎಂ ಹಾಗೂ ಇನ್ನೊಬ್ಬರು ಎಂ ಬಿ ಬಿ ಎಸ್ ಓದುತ್ತಿದ್ದಾರೆ . ಸದರಿ ನನ್ನ ಮಕ್ಕಳು ಇಬ್ಬರೂ ಸುಮಾರು 10 ರಿಂದ 12 ವರ್ಷಗಳಿಂದ ಹೊರಗಡೆ ವಿಧ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಸ್ವಂತ ಊರು ತೇಜೂರು ಗ್ರಾಮ ಎಂದರೆ ಸರಿ . ಈ ದಾವೆಯ ವಾದಿಯರು ನಮ್ಮ ಗ್ರಾಮದವರು ಎಂದರೆ ಸರಿ . ವಾದಿಯರು ನನಗೆ ದಾಯಾದಿಗಳು ಆಗಬೇಕು. ದಾಯಾದಿಗಳಲ್ಲಿ ಏನಾಗಬೇಕು ಎಂದರೆ ಅವರು ಅಣ್ಣ-ತಮ್ಮಂದಿರು ಎಂದು ನುಡಿಯುತ್ತಾರೆ. 1ನೇ ವಾದಿಗೆ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ . ಅವರ ಮಕ್ಕಳ ಪೈಕಿ ಒಬ್ಬರು ಡಾಕ್ಟರ್ , ಇನ್ನೊಬ್ಬರು ಇಂಜಿನಿಯರ್ ಎಂದರೆ ನನಗೆ ಗೊತ್ತಿಲ್ಲ. ನಿಮಗೆ ಅವರು ಗೊತ್ತಿಲ್ಲದೇ ಇರುವುದರಿಂದ ನಿಮ್ಮ ಊರಿನಲ್ಲಿ ನೀವು ಅವರನ್ನು ನೋಡಿಲ್ಲ ಎಂದರೆ ಸಾಕ್ಷಿಯು ನಾನು ನೋಡಿದ್ದೇನೆ ಎಂದು ನುಡಿಯುತ್ತಾರೆ. ನಾನು 1ನೇ ವಾದಿಯ ಮಕ್ಕಳನ್ನು ನೋಡಿ ಸುಮಾರು 7 ರಿಂದ 8 ವರ್ಷಗಳಾಯಿತು. ತದನಂತರ ನಾನು ಅವರನ್ನು ನೋಡಿಲ್ಲ.

2020ನೇ ಇಸವಿಯಲ್ಲಿ ನಾನು 1ನೇ ವಾದಿ ಹಾಗೂ ಅವರ ಮಗನ ವಿರುದ್ಧ ಒಂದು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ . ವಾದಿಯರು ಈಗಾಲೂ ಕೂಡ ತೇಜೂರು ಗ್ರಾಮದಲ್ಲಿ ವ್ಯವಸಾಯ ಮಾಡಿಕೊಂಡು ವಾಸವಿದ್ದಾರೆ ಎಂದರೆ ಸಾಕ್ಷಿಯು 1ನೇ ವಾದಿ ಇದ್ದಾರೆ, 2ನೇ ವಾದಿ

ಇರುವುದಿಲ್ಲ ಎಂದು ನುಡಿಯುತ್ತಾರೆ. 2ನೇ ವಾದಿ ಎಲ್ಲಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ, ಆದರೆ ಅವರು ಬದುಕಿದ್ದಾರೆ.

ನಾನು ಶಿಕ್ಷಕನಾಗಿ ನಿವೃತ್ತಿ ಹೊಂದಿ 7 ವರ್ಷಗಳಾಯಿತು. ವಾದಿಯರು ಈ ದಾವೆಯನ್ನು ಯಾವ ಪರಿಹಾರ ಕೇಳಿ ಹೂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿಯರ ಹಕ್ಕಿಗೆ ಒಳಪಟ್ಟ ಜಮೀನಿನ ಆಜು-ಬಾಜುದಾರ ನಾನು ಆಗಿರುತ್ತೇನೆ. ತೇಜೂರು ಗ್ರಾಮದ ಸರ್ವೆ ನಂಬರ್ 190/2ಎ ಯಲ್ಲಿ 20 ಗುಂಟೆ, ಸರ್ವೆ ನಂಬರ್ 190/3ಎ ರಲ್ಲಿ 1 ಎಕರೆ 3 ಗುಂಟೆ, 190/9ರಲ್ಲಿ 6 ಗುಂಟೆ, 190/11 ರಲ್ಲಿ 13 ಗುಂಟೆ, 190/4ಬಿ ಯಲ್ಲಿ 12 ಗುಂಟೆ, 190/5ಎ ರಲ್ಲಿ 25 ಗುಂಟೆ, 190/6 ಎ ರಲ್ಲಿ 1 ಎಕರೆ 16 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ . ಸದರಿ ಜಮೀನುಗಳನ್ನು ನಾನು ಸಾಗುವಳಿ ಮಾಡುತ್ತಿದ್ದೇನೆ.

ತೇಜೂರು ಗ್ರಾಮದಲ್ಲಿರುವ ಸರ್ವೆ ನಂಬರ್ 190/1ರಲ್ಲಿ 19 ಗುಂಟೆ, 190/2ಬಿ ರಲ್ಲಿ 21 ಗುಂಟೆ, 190/10ರಲ್ಲಿ 27 ಗುಂಟೆ, 190/3ಬಿ ಯಲ್ಲಿ 17 ಗುಂಟೆ ಜಮೀನುಗಳು ವಾದಿಯರ ಹಕ್ಕಿಗೆ ಒಳಪಟ್ಟ ಜಮೀನುಗಳು ಎಂದರೆ ಸಾಕ್ಷಿಯೂ ಅದು ಮೊದಲಿಗೆ 2ನೇ ವಾದಿಯ ಹೆಸರಿನಲ್ಲಿ ಇತ್ತು, ನಂತರ 1ನೇ ವಾದಿಯ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳನ್ನು ವಾದಿಯರು ಅವರ ತಂದೆಯ ಕಾಲದಿಂದಲೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು ಮೊದಲು 2ನೇ ವಾದಿ ಮಾಡುತ್ತಿದ್ದರು, ಇತ್ತಿಚ್ಚೇಗೆ 1ನೇ ವಾದಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ಹಾಗೂ ವಾದಿಯರ ಮಧ್ಯ ಈ ಮೇಲೆ ಹೇಳಿದ ಎಲ್ಲಾ ಜಮೀನುಗಳ ಹಕ್ಕು ಹಾಗೂ ಹಂಚಿಕೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಪ್ರಸ್ತುತ ದಾವೆಯ ದಾವಾ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಾವಾನುಸೂಚಿ 4 ಸ್ವತ್ತುಗಳ ದಕ್ಷಿಣ ದಿಕ್ಕಿಗೆ ನನ್ನ ಜಮೀನು ಇರುತ್ತದೆ ಎಂದರೆ ಸರಿ .

ನಾನು ಈ ದಾವೆಯಲ್ಲಿ ನನ್ನ ಪರವಾಗಿ ಏನೆಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಲಿಖಿತ ಹೇಳಿಕೆಯ ಪ್ರಕಾರ ನನ್ನ ಜಮೀನುಗಳನ್ನು ವಾದಿಯರು ಯಾವತ್ತೂ ಕೂಡ ವ್ಯವಸಾಯ ಮಾಡಿಲ್ಲ.

ನಾನು ಶಿಕ್ಷಕನಾಗಿದ್ದರಿಂದ ನನಗೆ ರಜೆ ಇದ್ದಾಗ ಮಾತ್ರ ನಾನು ನಮ್ಮೂರಿಗೆ ಹೋಗುತ್ತಿದ್ದೆ ಎಂದರೆ ಸರಿ . ನಾನು ನಿವೃತ್ತಿ ಹೊಂದುವ ಮೊದಲು ನನ್ನ ಜಮೀನುಗಳನ್ನು ಯಾರಿಂದಲೂ ವ್ಯವಸಾಯ ಮಾಡಿಸಿರುತ್ತಿರಲಿಲ್ಲ. ನಾನು ನಿವೃತ್ತಿ ಹೊಂದುವ ಮುಂಚೆ ಅಂದರೆ ಈ ದಾವೆಯನ್ನು ಸಲ್ಲಿಸುವ ಸುಮಾರು 6 ವರ್ಷಗಳ ಹಿಂದೆ 1ನೇ ವಾದಿ ಅವರ ಜಮೀನನಲ್ಲಿ ಬೋರ್ ವೆಲ್ ಕೊರೆಸಿರುವುದು ನನಗೆ ಗೊತ್ತು. ನನ್ನ ಹಕ್ಕು ಸ್ವಾಧೀನದಲ್ಲಿ ಇರುವ ಜಮೀನುಗಳಲ್ಲಿ 2 ಬೋರ್ ವೆಲ್ ಇರುತ್ತದೆ. ನಿಮ್ಮ ಬೋರ್ ವೆಲ್ ಗೆ ಕೆ.ಇ.ಬಿ ವೈಯರ್ ಸಂಪರ್ಕ ವಾದಿಯರ ಜಮೀನಿನ ಮೂಲಕವಾಗಿ ಹೋಗಿರುತ್ತದೆ ಎಂದರೆ ಸಾಕ್ಷಿಯು, ಮೊದಲು ಅವರ ಜಮೀನಿನ ಮೂಲಕವಾಗಿ ನಮ್ಮ ಜಮೀನಿಗೆ ಬಂದಿದ್ದು, ಈಗ ನಮ್ಮ ಜಮೀನಿನ ಮೂಲಕವಾಗಿ ವಾದಿಯರ ಜಮೀನಿನ ಬೋರ್ ವೆಲ್ ಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿಂದ ವಾದಿಯರ ಜಮೀನಿಗೆ ಸುಮಾರು 5 ರಿಂದ 6 ವರ್ಷಗಳ ಹಿಂದಿನಿಂದ ಕೆ.ಇ.ಬಿ ತಂತಿ ಸಂಪರ್ಕ ಇರುತ್ತದೆ. ನಿಮ್ಮ ಜಮೀನಿನ ಮೂಲಕವಾಗಿ ಕೆ.ಇ.ಬಿ ತಂತಿಯನ್ನು ವಾದಿಯರ ಜಮೀನಿಗೆ ತೆಗೆದುಕೊಳ್ಳುವ ಸಂದರ್ಭದಲ್ಲಿ ವಾದಿಯರು ಪರವಾನಗಿ ಪಡೆದುಕೊಂಡು transformer ಅಳವಡಿಸಿಕೊಂಡು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯರು ಯಾವುದೇ ಪರವಾನಗಿಯನ್ನು ಪಡೆದುಕೊಂಡಿಲ್ಲ ಹಾಗೂ ಅವರು ಯಾವುದೇ transformer ಅನ್ನು ಹಾಕಿಸಿಲ್ಲ ಎಂದು ನುಡಿಯುತ್ತಾರೆ .

ವಾದಿಯರು ಪರವಾನಗಿ ಪಡೆದುಕೊಂಡಿರುವುದಕ್ಕೆ ಹಾಗೂ transformer ಅನ್ನು ಹಾಕಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರಾ ಎನ್ನುವುದನ್ನು ನಾನು ತಿಳಿದುಕೊಂಡಿಲ್ಲ. ವಾದಿಯರು ಪರವಾನಗಿ ಪಡೆದುಕೊಂಡು transformer ಹಾಕಿಸಿರುವ ವಿಚಾರನ ನಾನು ನೋಡಿದ್ದರೂ ಹಾಗೂ ಸದರಿ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಶಿಕ್ಷಕರನಾಗಿರುವುದರಿಂದ ಯಾರಾದರೂ ಕಾನೂನು ಬಾಹಿರ ಚಟುವಟಿಕೆಗಳನ್ನು ಮಾಡಿದರೆ ಹಾಗೂ ಸರ್ಕಾರಕ್ಕೆ ನಷ್ಟ ಉಂಟುಮಾಡುವ ಯಾವುದಾದರು ಕೆಲಸವನ್ನು ಮಾಡಿದರೆ ಅದನ್ನು ಸಂಬಂಧಪಟ್ಟ ಇಲಾಖೆಗೆ ತಿಳಿಸಬೇಕೆನ್ನುವುದು ನನಗೆ ತಿಳಿದಿದೆ ಎಂದರೆ ಸರಿ . ಆ ರೀತಿ ಯಾವುದಾದರು ಅರ್ಜಿಗಳನ್ನು ನೀವು ವಾದಿಯರ ವಿರುದ್ಧ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನಾನು 2020 ರಲ್ಲಿ 1ನೇ ವಾದಿಯ ವಿರುದ್ಧ ಕೆ.ಇ.ಬಿ. ಗೆ ಅರ್ಜಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನೀಡಿದ ಅರ್ಜಿಯ ಆಧಾರದ ಮೇಲೆ 1ನೇ ವಾದಿಯ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಲ್ಲ. ನಾನು ನೀಡಿರುತ್ತೇನೆ ಎನ್ನುವ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆ ರೀತಿ ಯಾವುದೇ ಅರ್ಜಿಯನ್ನು ನಾನು ನೀಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಜಮೀನಿನಲ್ಲಿರುವ ಬೋರ್ ವೆಲ್ ಗಳನ್ನು ಕೊರೆಸಲು ಪರವಾನಗಿಯನ್ನು 2013ನೇ ಇಸವಿಯಲ್ಲಿ ನನ್ನ ಹೆಸರಿನಲ್ಲಿಯೇ ತೆಗೆದುಕೊಂಡಿರುತ್ತೇನೆ. ಸದರಿ 2 ಬೋರ್ ವೆಲ್ ಗಳನ್ನು ಕೊರೆಸಲು 2013ನೇ ಇಸವಿಯಲ್ಲಿಯೇ ಪರವಾನಗಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಮೊದಲಿಗೆ ಕೊರೆಸಿದ ಬೋರ್ ವೆಲ್ ಸರಿಯಾಗಿ ನೀರು ಬರುತ್ತಿಲ್ಲವಾದ್ದರಿಂದ ಹಾಗೂ voltage ಕೂಡ ಕಡಿಮೆ

ಆಗಿದ್ದರಿಂದ 2017 ರಂದು ಇನ್ನೊಂದು ಬೋರ್ ವೆಲ್ ಅನ್ನು ಕೊರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಕೊರೆಸಿರುವ 2 ಬೋರ್ ವೆಲ್‌ಗಳನ್ನು ಕಾನೂನಿಗೆ ಅನುಗುಣವಾಗಿ ಕೊರೆಸಿರುವ ಎಲ್ಲಾ ದಾಖಲೆಗಳು ನನ್ನ ಬಳಿ ಇರುತ್ತದೆ. ಸದರಿ ದಾಖಲೆಗಳನ್ನು ನನ್ನ ಮುಖ್ಯ ವಿಚಾರಣೆ ಸಮಯದಲ್ಲಿ ನಾನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಬೋರ್ ವೆಲ್‌ಗಳನ್ನು ಕೊರೆಸಲು ಪರವಾನಗಿಯನ್ನು ಪಡೆದುಕೊಂಡಿರುವುದಕ್ಕೆ ಸಂಬಂಧಪಟ್ಟ ಯಾವುದೇ ದಾಖಲೆಗಳು ನನ್ನ ಮನೆಯಲ್ಲಿ ಇಲ್ಲದೆ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು 2 ಬೋರ್ ವೆಲ್‌ಗಳನ್ನು ಕೊರೆಸುವ ಮುಂಚೆ ವಾದಿಯರು ಬೋರ್ ವೆಲ್‌ಗಳನ್ನು ಕೊರೆಸಿರುತ್ತಾರೆ ಎಂದರೆ ಸಾಕ್ಷಿಯು ನಾನು 2 ಬೋರ್ ವೆಲ್‌ಗಳನ್ನು ಕೊರೆಸಿದ ನಂತರ ಅವರು ಬೋರ್ ವೆಲ್ ಅನ್ನು ಕೊರೆಸಿರುತ್ತಾರೆ ಎಂದು ನುಡಿಯುತ್ತಾರೆ. ಮೊದಲಿಗೆ ವಾದಿಯರು ಬೋರ್ ವೆಲ್ ಅನ್ನು ಕೊರೆಸಿದ್ದರು, ನಾನು ಮೊದಲಿಗೆ ಕೊರೆಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಮ್ಮ ಈ ಮೇಲೆ ಹೇಳಿದ ಜಮೀನುಗಳಿಗೆ 2 ಬೋರ್ ವೆಲ್ ನ ಅವಶ್ಯಕತೆ ಇದೆಯಾ ಎಂದರೆ ಸಾಕ್ಷಿಯು, 2 ಬೋರ್ ವೆಲ್ ನ ಅವಶ್ಯಕತೆ ಇರುವುದಿಲ್ಲ, 1 ಬೋರ್ ವೆಲ್ ವಿಫಲವಾಗಿದ್ದರಿಂದ ಇನ್ನೊಂದು ಬೋರ್ ವೆಲ್ ಅನ್ನು ಕೊರೆಸಿರುತ್ತೇನೆ ಎಂದು ನುಡಿಯುತ್ತಾರೆ. ದಿ. 08.02.2021 ನೇ ಸಾಲಿನಲ್ಲಿ ನನ್ನ ಆಸ್ತಿಗಳಲ್ಲಿ ಏನು ಬೆಳೆ ಬೆಳೆಯಾಗಿತ್ತು ಎಂದು ನನಗೆ ನೆನಪಿಲ್ಲ. ನಾನು ಹಾಜರು ಪಡಿಸಿರುವ ಜಮೀನಿನ ದಾಖಲೆಗಳ ಪ್ರಕಾರ ನನ್ನ ಜಮೀನುಗಳೆಲ್ಲವೂ ಖುಷ್ಕಿ ಜಮೀನು ಆಗಿದ್ದು ಅವು ಮಳೆ ಆಶ್ರಿತ ಜಮೀನು ಆದ್ದರಿಂದ ಅದರಲ್ಲಿ ರಾಗಿ ಮತ್ತು ಜೋಳವನ್ನು ಮಾತ್ರ ಬೆಳೆಯಲಾಗುತ್ತದೆ ಎಂದರೆ ಸರಿ . 2021ನೇ

ಸಾಲಿನಲ್ಲಿ ನಾನು ಸದರಿ ಜಮೀನಿನಲ್ಲಿ ಬೆಳೆದ ಬೆಳೆಯಿಂದ ಯಾವುದೇ ಆದಾಯ ಉಳಿದಿಲ್ಲ.

ನೀವು ನಿಮ್ಮ ತಕರಾರಿನಲ್ಲಿ 9 ಲಕ್ಷ ರೂಪಾಯಿ ನಷ್ಟ ಉಂಟು ಮಾಡಿರುತ್ತಾರೆ ಎಂದು ಸುಳ್ಳು ಬರೆಯಿಸಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಬರೆಯಿಸಿಲ್ಲ ಎಂದು ನುಡಿಯುತ್ತಾರೆ. 9 ಲಕ್ಷ ರೂಪಾಯಿ ನಷ್ಟ ಆಗಿರುತ್ತದೆ ಎಂದು 1ನೇ ವಾದಿಯ ಮೇಲೆ ನಾನು ಯಾವುದೇ ಕಾನೂನು ಕ್ರಮವನ್ನು ಜರುಗಿಸಿಲ್ಲ. 9 ಲಕ್ಷ ರೂಪಾಯಿ ನಷ್ಟ ಉಂಟು ಮಾಡಿರುತ್ತಾರೆ ಎನ್ನುವ ವರ್ಷದಲ್ಲಿ 1ನೇ ವಾದಿಯ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಆ ಸಮಯದಲ್ಲಿ ಆರೋಗ್ಯದ ಸಮಸ್ಯೆ ಇತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ನಿವೃತ್ತಿ ಹೊಂದ್ದಿದೆನು. ನನಗೆ ಇತ್ತು ಎನ್ನಲಾದ ಆರೋಗ್ಯದ ಸಮಸ್ಯೆ ದೀರ್ಘಕಾಲದ ಸಮಸ್ಯೆಯಾಗಿತ್ತು. ನಿಮಗೆ ಏನು ಸಮಸ್ಯೆ ಎಂದರೆ ಸಾಕ್ಷಿಯು ನನಗೆ ಸಕ್ಕರೆ ಕಾಯಿಲೆ, ರಕ್ತ ಒತ್ತಡ ಇತ್ತು ಹಾಗೂ ಪಾಶ್ವವಾಯು ಕೂಡ ಆಗಿತ್ತು ಎಂದು ನುಡಿಯುತ್ತಾರೆ. ನನಗೆ ಪಾಶ್ವವಾಯು ಆಗಿತ್ತು ಎನ್ನುವುದಕ್ಕೆ ಸಂಬಂಧಪಟ್ಟಂತೆ ನನ್ನಲ್ಲಿ ದಾಖಲೆಗಳು ಇರುತ್ತದೆ. ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಕ್ಕರೆ ಕಾಯಿಲೆ ಹಾಗೂ ರಕ್ತ ಒತ್ತಡ ಇದ್ದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಹಾಗೂ ಮಾತನಾಡಲು ಯಾವುದೇ ಸಮಸ್ಯೆ ಆಗುವುದಿಲ್ಲ ಎಂದರೆ ಸಾಕ್ಷಿಯು, ಕೆಲವು ಬಾರಿ ಸಮಸ್ಯೆ ಆಗುತ್ತದೆ, ಕೆಲವು ಬಾರಿ ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳುವ ರೀತಿ ನನಗೆ ಯಾವುದೇ ಸಮಸ್ಯೆಗಳು ಇರಲಿಲ್ಲ, ನಾನು ನ್ಯಾಯಾಲಯಕ್ಕೆ ಸುಳ್ಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾನುಸೂಚಿ ಸ್ವತ್ತುಗಳಿಗೆ ವಾದಿಯರು ಬರೆಯಿಸಿರುವ ಚೆಕ್ಕು ಬಂಧಿ ಸರಿ ಇರುವುದಿಲ್ಲ. ಯಾವ ಚೆಕ್ಕು ಬಂಧಿ ಸರಿ ಇಲ್ಲ ಎನ್ನುವುದನ್ನು ನಿಮ್ಮ ಲಿಖಿತ ಹೇಳಿಕೆಯಲ್ಲಿ ಬರೆಯಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ವಿವರವಾಗಿ ಬರೆದಿಲ್ಲ ಎಂದು ನುಡಿಯುತ್ತಾರೆ. ನನ್ನ ಜಮೀನಿನ ಉತ್ತರಕ್ಕೆ ಹಾಗೂ ವಾದಿಯರ ಜಮೀನಿನ ದಕ್ಷಿಣಕ್ಕೆ ಮಧ್ಯದಲ್ಲಿ ತಂತಿ ಬೇಲಿ ಇದೆ ಎಂದರೆ ಸರಿ . ಸದರಿ ತಂತಿ ಬೇಲಿ ಅಂದಾಜು 50 ಕಂಬಗಳ ತಂತಿ ಬೇಲಿಯಾಗಿರಬಹುದು. ಸದರಿ ತಂತಿ ಬೇಲಿಯ ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಅಂದಾಜು 8 ರಿಂದ 10 ಅಡಿ ದೂರ ಇರಬಹುದು. ಸದರಿ ತಂತಿ ಬೇಲಿ 1ನೇ ವಾದಿಯ ಜಮೀನಿನಲ್ಲಿ ಇದ್ದು ಅದನ್ನು ಅವರೇ ಹಾಕಿಸಿಕೊಂಡಿರುತ್ತಾರೆ ಎಂದರೆ ಸರಿ .

**( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು).**

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.